ಕರಾಸಕೈಅನಿನಿ

**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಒಂದು ಉದ್ಯಮ)**

**ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010**
**ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in**

---

ಸಂಖ್ಯೆ:ಸಮನ್ವಯ:ಕೈವ:ಉಲ್ಲಾರ್ತಿಕಾವಲ್:ನಿವೇಶನ:ಭೂದರ:ನಿಗದಿ:2017 | 4357. ದಿನಾಂಕ: 07-03-2018

**ಕಛೇರಿ ಆದೇಶ**

ವಿಷಯ: ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಉಳ್ಳಾರ್ತಿಕಾವಲ್ ಕೈಗಾರಿಕಾ ವಸಾಹತುವಿನ ನಿವೇಶನ /ಜಮೀನಿನ ಭೂದರವನ್ನು ನಿಗದಿಪಡಿಸುವ ಬಗ್ಗೆ.

-------

**ಪ್ರಸ್ತಾವನೆ:**

ನಿಗಮದಿಂದ, ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕಿನ ಉಳ್ಳಾರ್ತಿಕಾವಲ್‌ನಲ್ಲಿ ಕೈಗಾರಿಕಾ ವಸಾಹತುವಿನ ಸ್ಥಾಪನೆ ಹಾಗೂ ಅದರ ಅಭಿವೃದ್ಧಿ ಸಲುವಾಗಿ 250.00 ಎಕರೆ ವಿಸ್ತೀರ್ಣದ ಜಮೀನನ್ನು ಪಡೆದುಕೊಂಡು, 2017ರಲ್ಲಿ ಅವಶ್ಯ ಮೂಲಭೂತ ಸೌಕರ್ಯಗಳನ್ನೊಳಗೊಂಡ 1ನೇ ಫೇಸ್ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಲಾಗಿದ್ದು, ಸದರಿ 1ನೇ ಫೇಸ್‌ನಲ್ಲಿ ಒಟ್ಟು 768 ಸಂಖ್ಯೆ ವಿವಿಧ ಅಳತೆಯ ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ, ಸದರಿ ನಿವೇಶನಗಳನ್ನು ಹೊಸದಾಗಿ ಹಂಚಿಕೆ ಮಾಡಬೇಕಿದ್ದ ಹಿನ್ನೆಲೆಯಲ್ಲಿ, ನಿಗಮದ ಹೊಸ ಕೈಗಾರಿಕಾ ವಸಾಹತುಗಳ ನಿವೇಶನ/ಜಮೀನಿನ ಭೂದರವನ್ನು ನಿಗಮದ ಮಂಡಳಿಯ ಕಾರ್ಯನೀತಿ ನಿರ್ಣಯ ಹಾಗೂ ಮಾರ್ಗಸೂಚಿಗಳ ಅನ್ವಯ ನಿವೇಶನ/ಜಮೀನಿನ ಭೂ ದರವನ್ನು ಲೆಕ್ಕಾಚಾರ ಮಾಡಿ, ನಿವೇಶನ / ಜಮೀನಿನ ಭೂದರ ನಿಗದಿಪಡಿಸಬೇಕಿರುತ್ತದೆ.

ಸದರಿ ಕೈಗಾರಿಕಾ ನಿವೇಶನಗಳ ಹಂಚಿಕೆಯಿಂದಾಗಿ, ನಿಗಮಕ್ಕೆ ಆದಾಯವನ್ನು ಗಳಿಸುವ ಉದ್ದೇಶದಿಂದ ಉಳ್ಳಾರ್ತಿಕಾವಲ್, ಕೈಗಾರಿಕಾ ವಸಾಹತುವಿನ 1ನೇ ಫೇಸ್‌ನಲ್ಲಿ ಮಾರಾಟ ಮಾಡಬಹುದಾದ ನಿವೇಶನಗಳ ಒಟ್ಟು ಕ್ಷೇತ್ರವು 360852 ಚದರ ಮೀಟರ್‌ಗಳೆಂದು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

...2..

ಅಂತೆಯೇ, ಉಳ್ಳಾರ್ತಿಕಾವಲ್ ಕೈಗಾರಿಕಾ ವಸಾಹತುವಿನ ಸುತ್ತಮುತ್ತಲಿನ ಭೂಮಿಯ ಮಾರ್ಗಸೂಚಿ ದರವನ್ನು ಪರಿಗಣಿಸಿ ಮತ್ತು ನಿಗಮವು ಆರ್ಥಿಕವಾಗಿ ಹೆಚ್ಚುವರಿ ಆದಾಯವನ್ನು ಗಳಿಸುವುದೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಸದರಿ ನಿವೇಶನ/ಜಮೀನಿನ ಭೂದರವನ್ನು ಪ್ರತಿ ಚದರ ಮೀಟರ್‌ಗೆ **ರೂ.1,800/-**ಗಳಿಗೆ ನಿಗದಿಪಡಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ಕೆಳಗಿನ ಆದೇಶ.

## ಆ ದೇ ಶ

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟಿರುವ ವಿವಿಧ ಅಂಶಗಳ ಹಿನ್ನೆಲೆಯಲ್ಲಿ, ಚಿತ್ರದುರ್ಗ ಜಿಲ್ಲೆಯಲ್ಲಿ ನಿಗಮದ ವತಿಯಿಂದ ಸ್ಥಾಪಿಸಲ್ಪಟ್ಟಿರುವ **ಉಳ್ಳಾರ್ತಿಕಾವಲ್ ಕೈಗಾರಿಕಾ ವಸಾಹತುವಿನಲ್ಲಿನ 1ನೇ ಫೇಸ್‌ನಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನ / ಜಮೀನಿನ ಭೂದರವನ್ನು ಪ್ರತಿ ಚದರ ಮೀಟರ್ ಒಂದಕ್ಕೆ ರೂ.1,800/- (ರೂಪಾಯಿ ಒಂದು ಸಾವಿರದ ಎಂಟು ನೂರು ಮಾತ್ರ) ಗಳಿಗೆ ನಿಗದಿಪಡಿಸಲಾಗಿದೆ.**

ವ್ಯವಸ್ಥಾಪಕ ನಿರ್ದೇಶಕರು

ಗೆ,

1) ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ)/(ವ&ಕಾಲೆ), ಕರಾಸಕೈಅನಿನಿ, ಬೆಂಗಳೂರು / ತುಮಕೂರು ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2) ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
3) ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ದಾವಣಗೆರೆ ಇವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.

ಪ್ರತಿ:

1) ವ್ಯವಸ್ಥಾಪಕ ನಿರ್ದೇಶಕರು, ಕರಾಸಕೈಅನಿನಿ, ಬೆಂಗಳೂರು ಬೆಂಗಳೂರು ಇವರ ಅಮೂಲ್ಯ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ&ಭೂಸ್ವಾಧೀನ) / (ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
3) ಉಪ ಪ್ರಧಾನ ವ್ಯವಸ್ಥಾಪಕರು(ಆ.ಲೆ.ಪ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ
4) ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ನಿಗಮದ ವೆಬ್‌ಸೈಟ್‌ನಲ್ಲಿ ಅಡಕಗೊಳಿಸಲು.